**<u>ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ</u>**

ಉಪಸ್ಥಿತರು

**ಶ್ರೀಮತಿ ಪವಿತ್ರ.ಎಂ.ಡಿ ಬಿ.ಎ., ಎಲ್.ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.**
**ತರೀಕೆರೆ**

# ಅಸಲು ದಾವಾ ನಂ.*371/2018*

**ದಿನಾಂಕಃ *25*ನೇ ಫೆಬ್ರವರಿ *2019***

**ವಾದಿಗಳು** : *1.* ಬಿ.ಎಂ.ಶಿವಮೂರ್ತಿ ಬಿನ್ ದಿಃ ಮಲ್ಲಪ್ಪ,
ಸುಮಾರು *60* ವರ್ಷ.

*2.* ಬಿ.ಎಂ.ಕುಮಾರ ಬಿನ್ ದಿಃ ಮಲ್ಲಪ್ಪ,
ಸುಮಾರು *52* ವರ್ಷ.

ಇಬ್ಬರ ವೃತ್ತಿಃ ಜಿರಾಯ್ತು ಕಸುಬು,
ವಾಸಃ ಬೆಟ್ಟದಹಳ್ಳಿ ಗ್ರಾಮ,
ಕಸಬಾ ಹೋಬಳಿ, ತರೀಕೆರೆ ತಾಲ್ಲೂಕು.

**(ಪ್ರತಿನಿಧಿಸಿದವರು : ಶ್ರೀ ಬಿ.ಎನ್.ಕಿರಣ್ ಕುಮಾರ್.-ನ್ಯಾಯವಾದಿಗಳು)**

**- ವಿರುದ್ಧ -**

**ಪ್ರತಿವಾದಿಗಳು** : *1.* ಪುಟ್ಟಪ್ಪ ಬಿನ್ ದಿಃ ಮಲ್ಲಪ್ಪ,
ಸುಮಾರು *70* ವರ್ಷ,
ಜಿರಾಯ್ತು ಕಸುಬು,
ವಾಸಃ ಯರೆಬೈಲು ಗ್ರಾಮ,
ಎಂ.ಸಿ.ಹಳ್ಳಿ ಅಂಚೆ,
ತರೀಕೆರೆ ತಾಲ್ಲೂಕು.

*2.* ಬಿ.ಎಂ.ಶೇಖರಪ್ಪ ಬಿನ್ ದಿಃ ಮಲ್ಲಪ್ಪ,
ಸುಮಾರು *65* ವರ್ಷ,
ಜಿರಾಯ್ತು ಕಸುಬು,

ವಾಸ: ಬೆಟ್ಟದಹಳ್ಳಿ ಗ್ರಾಮ,
ಕಸಬಾ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸಿದವರು : ಡಿ-1 ಶ್ರೀ ಡಿ.ಎನ್.ಗೋಪಿನಾಥ-ನ್ಯಾಯವಾದಿಗಳು)

ಡಿ-2 ಶ್ರೀ ವಿ.ನಾರಾಯಣ-ನ್ಯಾಯವಾದಿಗಳು)

**ಮಧ್ಯಂತರ ಅರ್ಜಿ ಸಂಖ್ಯೆ:4**

**ಅರ್ಜಿದಾರರು** : ಬಿ.ಎಂ.ಶಿವಮೂರ್ತಿ

- ವಿರುದ್ದ -

**ಎದುರುದಾರರು** : ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾದಿಕಾರ ತುಮಕೂರು-ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ.206, ಎಂ.ಆರ್.ಎಫ್ ಟೈರ್ ಕಟ್ಟಡ, ಬೈಪಾಸ್ ರಸ್ತೆ, ಶಿವಮೊಗ್ಗ.

__

## ಮಧ್ಯಂತರ ಅರ್ಜಿ ಸಂಖ್ಯೆ:4 ರ ಮೇಲಿನ ಆದೇಶ

ವಾದಿಯು ಪ್ರಸ್ತುತ ಅರ್ಜಿಯನ್ನು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿದ್ದು, ಈ ದಾವೆ ಮುಗಿಯುವ ತನಕ ಅರ್ಜಿ ಅನುಸೂಚಿ ಸ್ವತ್ತುಗಳ ಬಾಬ್ತು ಯಾವುದೇ ಪರಿಹಾರವನ್ನು ಸಹ ಪ್ರತಿವಾದಿಗಳಿಗೆ ನೀಡದಂತೆ ಭೂ ಸ್ವಾಧೀನಾಧಿಕಾರಿಗಳು ಹಾಗೂ ಒಂದೊಮ್ಮೆ ಭೂ ಸ್ವಾಧೀನಪಡಿಸಿಕೊಂಡರೆ ಪರಿಹಾರವನ್ನು ನ್ಯಾಯಾಲಯದಲ್ಲಿ ಠೇವಣಿ ಇರುವಂತೆ ನಿರ್ದೇಶಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಅವರು ಮತ್ತು ಪ್ರತಿವಾದಿಯರು ಬೆಟ್ಟದಹಳ್ಳಿ ಗ್ರಾಮದ ವಾಸಿಯಾದ ಮಲ್ಲಪ್ಪನವರ ಮಕ್ಕಳಾಗಿದ್ದು, ಸದರಿ ಮಲ್ಲಪ್ಪನವರು ಸದರಿ 25 ವರ್ಷಗಳ ಹಿಂದೆಯೇ ದಾವೆಯ ಪಕ್ಷಗಾರರನ್ನು ಬಿಟ್ಟು ಮೃತಪಟ್ಟಿದ್ದು, ಮಲ್ಲಪ್ಪನವರ ಜೀವಂತ ಕಾಲದಲ್ಲಿಯೇ 1ನೇ

ಪ್ರತಿವಾದಿಯು ಕುಟುಂಬದ ಯಜಮಾನಿಕೆಯನ್ನು ಮಾಡುತ್ತಿದ್ದರೆಂದು ಹೇಳಿದ್ದು, ಅವರು ಮುಂದುವರೆದು, ಮಲ್ಲಪ್ಪನವರ ಜೀವಿತ ಕಾಲದಲ್ಲಿಯೇ ಹೆಣ್ಣು ಮಕ್ಕಳ ನಡುವೆ ಸರಿ ಬಾರದಿದ್ದ ಕಾರಣ ಜಮೀನುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಬೇಲಿ ಹಾಕಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆಂದು ಹೇಳಿರುತ್ತಾರೆ. ಅವರು ಮುಂದುವರೆದು, ಅವರ ಪ್ರತ್ಯೇಕ ಸ್ವಾಧೀನದಲ್ಲಿರುವ ಸ್ವತ್ತುಗಳು ದಾವಾ ಅನುಸೂಚಿ ಎ ಮತ್ತು ಬಿ ಸ್ವತ್ತುಗಳಾಗಿದ್ದು, ಅವರ ರೀತಿಯೇ ಪ್ರತಿವಾದಿಗಳೂ ಸಹ ಅವರ ಅನುಭವದಲ್ಲಿರುವ ಸ್ವತ್ತನ್ನು ಅಭಿವೃದ್ಧಿಪಡಿಸಿಕೊಂಡಿರುತ್ತಾರೆಂದು ಹೇಳಿದ್ದು, ಅವರು ಮುಂದುವರೆದು, ಅರ್ಜಿ ಅನುಸೂಚಿ ಸ್ವತ್ತುಗಳು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೇ ಇದ್ದು, ಆ ಸ್ವತ್ತಿನ ಖಾತೆಯು *1*ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಆ ಸ್ವತ್ತುಗಳ ಪೈಕಿ ಕೆಲವೊಂದು ಭಾಗವನ್ನು ಹೆದ್ದಾರಿಯ ವಿಸ್ತರಣೆಗೋಸ್ಕರ ಪ್ರಕ್ರಿಯೆಯ ಚಾಲನೆಯಲ್ಲಿದ್ದು, ಆ ಬಾಬ್ತು ಅವರಿಗೂ ಸಹ ಒಂದು ನೋಟೀಸ್ ಸಹ ಸಿಕ್ಕಿದ್ದು, ಆದರೆ *1*ನೇ ಪ್ರತಿವಾದಿಯು ನನ್ನ ಹೆಸರಿನಲ್ಲಿ ಜಮೀನಿನ ಖಾತೆ ಇದೆ ಎಂದು ಹೇಳಿಕೊಂಡು ತಿರುಗುತ್ತಿರುವ ಕಾರಣ ಒಂದೊಮ್ಮೆ ಭೂ ಸ್ವಾಧೀನಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡದಿದ್ದಲ್ಲಿ ಅದರಿಂದ ಅವರಿಗೂ ಮತ್ತು *2*ನೇ ವಾದಿಗೂ ತುಂಬಲಾರದ ನಷ್ಟ ಉಂಟಾಗುವ ಕಾರಣ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆಂದು ಹೇಳಿರುತ್ತಾರೆ.

*3. 1*ನೇ ಪ್ರತಿವಾದಿಯು ಮೇಲ್ಕಂಡ ಅರ್ಜಿಗೆ ತಮ್ಮ ತಕರಾರು ಅರ್ಜಿಯನ್ನು ಸಲ್ಲಿಸಿದ್ದು, ತಮ್ಮ ತಕರಾರು ಪತ್ರದಲ್ಲಿ ವಾದಿಯ ದಾವೆಯು ಊರ್ಜಿತವಾಗತಕ್ಕದ್ದಲ್ಲವೆಂದು ಹಾಗೂ ವಾದಿ ಮತ್ತು ಪ್ರತಿವಾದಿಗಳ ತಂದೆ ಜೀವಂತವಿದ್ದಾಗಲೇ ಅವರವರ ಹಿಸ್ಸೆಗಳನ್ನು ಅವರವರಿಗೆ ವರ್ಗಾಹಿಸಿದ್ದು, ಅಂದಿನಿಂದಲೇ ವಾದಿ ಮತ್ತು ಪ್ರತಿವಾದಿಯರು ಅವರ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆಂದು ಹೇಳಿರುತ್ತಾರೆ. ಅವರು ಮುಂದುವರೆದು ಹೆದ್ದಾರಿ ಅಗಲೀಕರಣ ವಿಸ್ತೀರ್ಣಗೋಸ್ಕರ ಪ್ರತಿವಾದಿಯ ಸ್ವಯಾರ್ಜಿತ

ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ನಡೆದಿರುವುದು ಸರಿ ಇದ್ದು, ಅದು ಕಾನೂನು ಬದ್ಧವಾಗಿದ್ದು, ಅದೂ ಅಲ್ಲದೇ, ಹಾಲಿ ಖಾತೆದಾರ ಮತ್ತು ಅನುಭವದಾರರು ಯಾರೆಂಬುದೆನ್ನು ಪರಂಭರಿಸಿ ಕಾನೂನಿನ ರೀತಿಯಲ್ಲಿಯೇ ವಶಪಡಿಸಿಕೊಂಡ ಭೂಮಿಗೆ ತಕ್ಕಷ್ಟು ಪರಿಹಾರವನ್ನು ನೀಡುವುದು ಕಾನೂನು ಬದ್ಧವಾಗಿರುತ್ತದೆಂದು ಹೇಳಿರುತ್ತಾರೆ. ಆ ಕಾರಣದಿಂದ ವಾದಿಯು ಸಲ್ಲಿಸಿರುವ ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಲು ಕೋರಿರುತ್ತಾರೆ.

*4.* ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

*5.* ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸುತ್ತವೆ:

## ***ಅಂಶಗಳು***

1. ವಾದಿ/ಅರ್ಜಿದಾರರು ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

2. ವಾದಿ/ಅರ್ಜಿದಾರರು ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

3. ವಾದಿ/ಅರ್ಜಿದಾರರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದೇ ಹೋದಲ್ಲಿ ತಮಗೆ ತೊಂದರೆ ಹಾಗೂ ನಷ್ಟ ಅಗುತ್ತದೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

4. ಹಾಗಾದರೆ ಯಾವ ಆದೇಶ?

*6.* ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ:

ಅಂಶ – *1* : ನಕಾರಾತ್ಮಕವಾಗಿ,

ಅಂಶ – 2 : ನಕಾರಾತ್ಮಕವಾಗಿ,

ಅಂಶ – 3 : ನಕಾರಾತ್ಮಕವಾಗಿ,

ಅಂಶ – 4 : ಕೊನೆಯ ಆದೇಶದ ಮೇರೆಗೆ

## ಕಾ ರ ಣ ಗ ಳು

7. **ಅಂಶ:1 ರಿಂದ 3:-** ಈ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದಲೂ ಮತ್ತು ಇವುಗಳಿಗೆ ನೀಡಲಾಗುವ ಕಾರಣಗಳು ಒಂದೇ ರೀತಿ ಇರುವುದರಿಂದಲೂ, ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಪ್ರಸ್ತುತ ದಾವೆಯನ್ನು ವಾದಿಯು ಅವರು ಜುಬಾನೆ ಹಿಸ್ಸೆಯಂತೆ ದಾವಾ ಎ ಮತ್ತು ಬಿ ಅನಸೂಚಿ ಸ್ವತ್ತುಗಳ ಸ್ವಾಧೀನಾನುಭವದಲ್ಲಿರುತ್ತಾರೆಂದು ಘೋಷಣೆ ಮಾಡಬೇಕೆಂದು ಹಾಗೂ ಸಿ ಅನುಸೂಚಿ ಸ್ವತ್ತಿನಲ್ಲಿ ಈ ಹಿಂದೆ ವಿಭಾಗದಂತೆ ತೆಗೆದುಕೊಂಡಿರುವ ಉತ್ತರ ದಕ್ಷಿಣ ಭಾಗದ ಹಕ್ಕಿನ ಬದಲಾಗಿ ಪೂರ್ವ ಪಶ್ಚಿಮವಾಗಿ ಸಮನಾಗಿ ಪುನರ್ವಿಭಾಗ ಮಾಡಿ ಸ್ವಾಧೀನ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

8. ವಾದಿ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಎದುರುದಾರರ ವಿರುದ್ಧ ದಾವೆ ವಿಲೇವಾರಿಯಾಗುವವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆ ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ವಾದಿಯು ತಮ್ಮ ಅರ್ಜಿಯಲ್ಲಿ ಸುಮಾರು 25 ವರ್ಷಗಳ ಹಿಂದೆ ಮಲ್ಲಪ್ಪನವರು ದಾವೆಯ ಪಕ್ಷಗಾರರನ್ನು ಬಿಟ್ಟು ಮೃತಪಟ್ಟಿದ್ದು, ಅವರ ಜೀವಂತ ಕಾಲದಲ್ಲಿಯೇ ಬಾಯಿ ಮಾತಿನಲ್ಲಿ ಜಮೀನುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನ ಮತ್ತು ಅನುಭವದಲ್ಲಿದ್ದು, ಅವರು ಪ್ರತ್ಯೇಕವಾಗಿ ಸ್ವಾಧೀನದಲ್ಲಿರುವ ಸ್ವತ್ತು ಎ ಮತ್ತು ಬಿ ಎಂದು ವಿವರವಾಗಿ ತೋರಿಸಲಾಗಿದೆ ಎಂದು ಹೇಳಿದ್ದು, ಅವರು ಮುಂದುವರೆದು, ಅರ್ಜಿ ಅನುಸೂಚಿ ಸ್ವತ್ತುಗಳು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೇ ಇದ್ದು, ಸದರಿ ಸ್ವತ್ತುಗಳ ಖಾತೆ ಕುಟುಂಬದ ಹಿರಿಯನಾದ 1ನೇ ಪ್ರತಿವಾದಿಯ

ಹೆಸರಿನಲ್ಲಿದ್ದು ಸದರಿ ಜಮೀನುಗಳ ಕೆಲವೊಂದು ಭಾಗ ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆಗೋಸ್ಕರ ವಶಪಡಿಸಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಭೂ ಸ್ವಾಧೀನಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡದೇ ಇದ್ದಲ್ಲಿ ವಾದಿಯವರಿಗೆ ತುಂಬಲಾಗದ ನಷ್ಟ ಉಂಟಾಗುತ್ತದೆಂದು ಹೇಳಿರುತ್ತಾರೆ. *1*ನೇ ಪ್ರತಿವಾದಿಯೂ ಸಹ ತಮ್ಮ ತಕರಾರು ಅರ್ಜಿಯಲ್ಲಿ ಸುಮಾರು *28-30* ವರ್ಷಗಳ ಹಿಂದೆಯೇ ವಾದಿ ಮತ್ತು ಪ್ರತಿವಾದಿಯರು ಜುಬಾನೆ ಮಾಡಿಕೊಂಡಿದ್ದು, ವಾದಿ ಮತ್ತು ಪ್ರತಿವಾದಿಯವರು ಅಂದಿನಿಂದಲೇ ಸ್ವಾಧೀನಾನುಭವ ಹೊಂದಿರುತ್ತಾರೆಂದು ಹೇಳಿರುತ್ತಾರೆ.

*9.* ಉಭಯ ಪಕ್ಷಗಾರರ ವಾದ-ವಿವಾದಗಳೊಂದಿಗೆ ಅವರು ಈ ಹಂತದಲ್ಲಿ ಹಾಜರ್ಪಡಿಸಿರುವ ದಾಖಲಾತಿಗಳನ್ನು ವಾದಿಯು ಮೇಲ್ನೋಟಕ್ಕೆ ತಮ್ಮ ಪ್ರಕರಣವನ್ನು ಸಾಬೀತುಪಡಿಸುತ್ತಾರೆಯೇ ಎಂದು ಪರಿಶೀಲಿಸಲಾಯಿತು. ವಾದಿಯು ಅರ್ಜಿ ಅನುಸೂಚಿ ಸ್ವತ್ತುಗಳ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಗಳಿಂದ ಕಂಡುಬರುವಂತೆ ಅರ್ಜಿ ಅನುಸೂಚಿ ಸ್ವತ್ತುಗಳು *1*ನೇ ಪ್ರತಿವಾದಿಯ ಹೆಸರಿನಲ್ಲಿರುತ್ತವೆಂದು ತೋರಿಸುತ್ತವೆ. ವಾದಿಯು ಪ್ರಸ್ತುತ ಪ್ರಕರಣದಲ್ಲಿ ಇತರೆ ದಾಖಲೆಗಳನ್ನು ಹಾಜರುಪಡಿಸಿದ್ದರೂ ಸಹ ಸದರಿ ದಾಖಲಾತಿಗಳು ಇತರೆ ದಾವಾ ಸ್ವತ್ತುಗಳಿಗೆ ಸಂಬಂಧಿರುವ ಕಾರಣ ಸದರಿ ದಾಖಲಾತಿಗಳ ಬಗ್ಗೆ ಈ ಹಂತದಲ್ಲಿ ಅಪ್ರಸ್ತುತವಾಗಿರುತ್ತದೆನ್ನುವ ಅಭಿಪ್ರಾಯಕ್ಕೆ ಬಂದಿರುತ್ತೇನೆ.

*10.* ಮೇಲ್ಕಂಡ ದಾಖಲಾತಿಗಳನ್ನು ವಾದ ಮತ್ತು ಪ್ರತಿವಾದ ಪತ್ರದೊಂದಿಗೆ ಕೂಲಂಕುಷವಾಗಿ ಪರಿಶೀಲಿಸಿದಾಗ ವಾದಿಯೇ ಹೇಳುವಂತೆ ಮಲ್ಲಪ್ಪನವರ ಜೀವಿತ ಅವಧಿಯಲ್ಲಿಯೇ ಅವರು ಬಾಯಿ ಮಾತಿನಿಂದ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿದ್ದು, ಸದರಿ ಜುಬಾನೆ ವಿಭಾಗದಲ್ಲಿ ದಾವಾ ಅನುಸೂಚಿ ಎ ಮತ್ತು ಬಿ ಸ್ವತ್ತುಗಳು ಅವರ ಹಿಸ್ಸೆಗೆ ಬಂದಿದ್ದು, ಅವರು ಸದರಿ ಸ್ವತ್ತುಗಳು ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆಂದು ತೋರಿಸುತ್ತದೆ. ಆದರೆ, ವಾದಿಯು ಪ್ರಸ್ತುತ

ಅರ್ಜಿಯಡಿ ಸರ್ವೆ ನಂ.*163/3* ಸರ್ವೆ ನಂ.*166/2,* ಸರ್ವೆ ನಂ.*169/2* ಹಾಗೂ *4/1* ರಲ್ಲಿನ ಸಂಪೂರ್ಣ ಜಮೀನಿಗೆ ಸಂಬಂಧಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪ್ರಾರ್ಥಿಸಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆಗೋಸ್ಕರ ನೋಟೀಸನ್ನು ಕೊಟ್ಟಿರುವುದು ಉಭಯ ಪಕ್ಷಗಾರರ ನಡುವೆ ಒಪ್ಪಿಕೊಂಡ ಸಂಗತಿಯಾಗಿದ್ದರೂ ಸಹ ಭೂ ಸ್ವಾಧೀನಾಧಿಕಾರಿಗಳು ವಾದಿಯ ಸ್ವಾಧೀನದಲ್ಲಿರುವ ಸ್ವತ್ತನ್ನು ಭೂ ಸ್ವಾಧೀನಪಡಿಸಿಕೊಂಡಿರುತ್ತಾರೆಂದು ತೋರಿಸಲು ಈ ಹಂತದಲ್ಲಿ ಯಾವುದೇ ಸೂಕ್ತ ದಾಖಲಾತಿಗಳು ಲಭ್ಯವಿರುವುದಿಲ್ಲ. ಭೂ ಸ್ವಾಧೀನಾಧಿಕಾರಿಗಳು ವಾದಿಯ ಹೆಸರಿಗೆ ನೋಟೀಸ್ ಕೊಟ್ಟಿರುತ್ತಾರೆನ್ನುವ ಕಾರಣಕ್ಕೆ ಈ ಹಂತದಲ್ಲಿ ವಾದಿಯ ಪ್ರತ್ಯೇಕ ಸ್ವಾಧೀನದಲ್ಲಿರುವ ಜಮೀನು ಸಹ ಭೂ ಸ್ವಾಧೀನಕ್ಕೆ ಒಳಪಟ್ಟಿರುತ್ತದೆನ್ನುವ ನಿರ್ಣಯಕ್ಕೆ ಬರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಅದೂ ಅಲ್ಲದೇ ವಾದಿಯು ಜುಬಾನೆ ಹಿಸ್ಸೆಯಂತೆ ದಾವಾ ಎ ಮತ್ತು ಬಿ ಅನುಸೂಚಿ ಸ್ವಾಧೀನ ಹೊಂದಿರುತ್ತಾರೆಂದು ಘೋಷಣೆ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ. ಭೂ ಸ್ವಾಧೀನಾಧಿಕಾರಿಗಳು ಕೊಟ್ಟಿರುವ ನೋಟೀಸ್ ನಲ್ಲಿ ಮೇಲ್ಕಂಡ ಸರ್ವೆ ನಂಬರ್ಗಳ ಜಮೀನುಗಳಲ್ಲಿ ಎಷ್ಟು ವಿಸ್ತೀರ್ಣ್ದ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳುತ್ತಾರೆಂದು ತೋರಿಸಲು ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ. ಆದ್ದರಿಂದ ಈ ಹಂತರದಲ್ಲಿ ವಾದಿಯು ಪ್ರಾರ್ಥಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಿದ್ದಲ್ಲಿ ಅದರ ದುರುಪಯೋಗವಾಗುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತದೆನ್ನುವ ಅಭಿಪ್ರಾಯಕ್ಕೆ ಬಂದು ವಾದಿಯು ಮೇಲ್ನೋಟಕ್ಕೆ ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ವಿಫಲರಾಗಿರುವ ಕಾರಣ ಅವರು ಕೋರಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಲು ನಿರಾಕರಿಸಿದ್ದಲ್ಲಿ ವಾದಿಯರಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ ಹಾಗೂ ಅನುಕೂಲಕತೆಯ ಸಮತೋಲನವು ವಾದಿಯ ಪರವಾಗಿ ಇರುವುದಿಲ್ಲವೆನ್ನುವ ಅಭಿಪ್ರಾಯಕ್ಕೆ ಬಂದು ಆ ಮೇರೆಗೆ ಅಂಶ *1* ರಿಂದ *3* ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

***11. ಅಂಶ:-4:*** ಈ ಮೇಲಿನ ಎಲ್ಲಾ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ***ಆದೇಶ***

ವಾದಿ/ಅರ್ಜಿದಾರರು ಸಿ.ಪಿ.ಸಿ ಕ್ರಮಾದೇಶ *39* ನಿಯಮ *1* ಮತ್ತು *2* ರಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ:*4* ನ್ನು ತಿರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

*(ಈ ಮಧ್ಯಂತರ ಅರ್ಜಿ ಸಂಖ್ಯೆ:4 ನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಬೆರಳಚ್ಚು ಮಾಡಿಸಿದ ನಂತರ, ಓದಿ, ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ **25** ನೇ ಫೆಬ್ರವರಿ **2019** ರಂದು ನಾನು ಉದ್ಘೋಷಿಸಿದ್ದೇನೆ.)*

ಸಹಿ/-

**(ಪವಿತ್ರ.ಎಂ.ಡಿ)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಅ.ಪ್ರ.ದ.ನ್ಯಾ.ದಂಃ ತರೀಕೆರೆ.**